ಮಾಧವಿ ಫೋನು ಮಾಡಬಹುದೆಂದು ಐದಾರು ದಿನ ಸಂಜೆ ಕಾದರು. ಅವಳಿಂದ ಫೋನೂ ಇಲ್ಲ. ಅವಳ ಮಗ ಮನೆಗೆ ಬಂದಿರಬಹುದೇ? ಏನು ತೊಂದರೆಯೋ ಎಂದೆಲ್ಲ ಯೋಚಿಸಿದರು. ಸ್ವಲ್ಪ ಸಮಾಧಾನ ಅನ್ನಿಸಿತು. ದಿನ ಕಳೆದಂತೆ ಮಾಧವಿ ಹೇಳಿದ್ದ ವಿಷಯಗಳ ತೀವ್ರತೆ ಕಡಿಮೆಯಾಯಿತು. ಯಾವಾಗಲೋ ನೆನಪಾಗುತ್ತಿದ್ದ ಅವಳು ಕ್ರಮೇಣ ಅವರ ನೆನಪಿನ ವ್ಯಾಪ್ತಿಯಿಂದ ಹೊರಗೆ ಉಳಿದುಬಿಟ್ಟಳು.

★★★

ಮೂರು ತಿಂಗಳು ಉರುಳಿದ್ದು ಗೊತ್ತೇ ಆಗಲಿಲ್ಲ. ಆಮೇಲೆ ಅವಳಿಂದ ಡಿಪಾರ್ಟ್‌ಮೆಂಟಿನ ವಿಳಾಸಕ್ಕೆ ಒಂದು ಪತ್ರ ಬಂತು. ಅವತ್ತು ಅವರಿಗೆ ತುಂಬಾ ಕೆಲಸಗಳು. ಕೂಡಲೇ ಪತ್ರ ಓದಲು ಅವರಿಗೆ ಆಗಲಿಲ್ಲ. ಅವತ್ತು ದೆಹಲಿಯ ಇಂಗ್ಲಿಷ್ ಲಿಟರರಿ ಸೊಸೈಟಿಯ ನಿಯೋಗವೊಂದು ಯೂನಿವರ್ಸಿಟಿಗೆ ಬಂದಿದ್ದರಿಂದ ಇಡೀ ದಿನ ಅವರು, ಮೀಟಿಂಗು, ವಿದ್ಯಾರ್ಥಿಗಳ ಜತೆಗೆ ಇಂಟರಾಕ್ಷನ್, ಅದು ಇದೂ ಅಂತ ಪುರುಸೊತ್ತೇ ಸಿಗಲಿಲ್ಲ.

ಸಂಜೆ ಕ್ಯಾಂಪಸ್ಸಿನಿಂದ ಯೂನಿವರ್ಸಿಟಿ ಬಸ್ಸಿನಲ್ಲಿ ಮನೆಗೆ ಹೋಗುವಾಗ ಅವರಿಗೆ ಮಾಧವಿಯ ಪತ್ರದ ನೆನಪಾಯಿತು. ಕೂಡಲೇ ಜೇಬಿಂದ ತೆಗೆದು ಒಡೆದರು. ಪಕ್ಕದ ಸೀಟಿನಲ್ಲಿ ಕುಳಿತಿರುವ ಹುಡುಗಿ ಲೆಟರ್ ಮೇಲೆ ಕಣ್ಣಾಡಿಸಬಹುದು ಅನ್ನಿಸಿತು. ಅವಳ ಭುಜ ಅವರ ತೋಳಿಗೆ ತಗುಲುತ್ತಿದೆ. ಮಗಳ ವಯಸ್ಸಿನ ಹುಡುಗಿ ತನ್ನ ಮೈ ತಾಕದಂತೆ ಕೂರಲು ಪ್ರಯತ್ನಿಸುತ್ತಲೇ ಇದ್ದಳು. ಅವಳ ದಡೂತಿ ದೇಹ ಅದಕ್ಕೆ ಆಸ್ಪದ ಕೊಡುತ್ತಿಲ್ಲ. ಈ ಕಾಲದ ಹುಡುಗಿ! ಕಿಟಕಿಯಾಚೆ ನೋಡುವಂತೆ ನಟಿಸುತ್ತ ಓರೆಕಣ್ಣಲ್ಲೇ ಅವಳನ್ನು ನೋಡಿದರು. ನಾರ್ಥ್ ಇಂಡಿಯನ್ ಇರಬಹುದು ಅನ್ನಿಸಿತು. ಗಾಢ ಫ್ರೆಂಚ್ ಸೆಂಟ್ ಪೂಸಿಕೊಂಡಿದ್ದಾಳೆ. ಹತ್ತು ನಿಮಿಷ ಕೂತಿದ್ದರೆ ಸೀನು ಬರೋದು ಖಂಡಿತ ಅನ್ನಿಸಿತು. ಅಷ್ಟರಲ್ಲಿ ಅವಳ ಸೆಲ್ ಫೋನ್ ಸಣ್ಣಗೆ ಬಿಪ್ ಸದ್ದು ಮಾಡಿತು. ತಕ್ಷಣ ಎತ್ತಿಕೊಂಡಳು. ಬಸ್ಸಲ್ಲಿದೀನಿ ಎನ್ನುತ್ತ ಆಫ್ ಬಟನ್ ಒತ್ತಿದಳು. ಕನ್ನಡದ ಹುಡುಗಿಯೇ! ಮುಂದಿನ ಸ್ಟಾಪ್‌ನಲ್ಲಿ ಬಸ್ ನಿಂತ ಕೂಡಲೇ ಇಳಿದಳು. ಮತ್ತೆ ಯಾರೂ ಅವರ ಪಕ್ಕ ಕೂರಲಿಲ್ಲ. ಕೈಯಲ್ಲಿದ್ದ ಪತ್ರ ಬಿಡಿಸಿದರು.

ಸರ್,

ನಿಮ್ಮನ್ನು ಭೇಟಿ ಮಾಡಿದ ಮರುದಿನವೇ ಹೊರಟು ಊರಿಗೆ ಬಂದೆ. ಹೋಂ ಮಿನಿಸ್ಟರನ್ನು ನೋಡಲು ಆಗಲಿಲ್ಲ. ಲಾಯರನ್ನೂ ನೋಡಲಿಲ್ಲ. ಮಗನ ಫೋಟೊ ಕಳಿಸುವಂತೆ ಹೇಳಿದ್ದಿರಿ. ಕೂಡಲೇ ಕಳಿಸೋಕೆ ಆಗಲಿಲ್ಲ. ಮನೆಗೆ ಬಂದ ಮೇಲೆ ಹೊಸ ತಾಪತ್ರಯಗಳು ಶುರುವಾದವು. ತಿಂಗಳ ಹಿಂದೆ ನನ್ನ ಗಂಡ ತೀರಿಹೋದರು. ಆನೆಯೊಂದು ಹಾಡಹಗಲೇ ನಮ್ಮ ಮನೆಯ ಮುಂದೇ ನನ್ನ ಕಣ್ಣೆದುರೇ ಅವರನ್ನು ತುಳಿದು ಸಾಯಿಸಿತು. ಅವರನ್ನು ಉಳಿಸಿಕೊಳ್ಳೋಕೆ ಆಗಲಿಲ್ಲ... ಕೆಲಸದ ಆಳುಗಳು, ನಾನು ಎಲ್ಲ ಅಸಹಾಯಕರಾಗಿ ನಿಂತು ನೋಡಬೇಕಾಯಿತು.

ಆನೆಗಳು ನಮ್ಮ ತೋಟಕ್ಕೆ ಬರುವುದು ನಮಗೆ ಹೊಸದೇನೂ ಅಲ್ಲ. ಅನೇಕ ಸಲ ಬಂದಿವೆ. ತೋಟದಲ್ಲೆಲ್ಲ ಓಡಾಡಿ ಬಾಳೆ, ಅನಾನಸು, ಹಲಸು ತಿಂದು, ತುಳಿದು ಹಾಕಿವೆ. ಎಷ್ಟೊ ಸಲ ರಾತ್ರಿ ವೇಳೆ ನಮ್ಮ ಮನೆಯ ಮುಂದೆ ಬಂದು ನಿಂತಿರ್ತವೆ. ಅವು ನಮಗೇನೂ ಮಾಡಿರಲಿಲ್ಲ. ಹಗಲು ಹೊತ್ತು ಬಂದರೆ ಮನೆಯಲ್ಲಿರೊ ಪಾತ್ರೆ ತಟ್ಟೆ, ಖಾಲಿ ಡಬ್ಬಗಳನ್ನು ಬಡಿದು ದೊಡ್ಡದಾಗಿ ಸದ್ದು ಮಾಡ್ತಿ ಓಡಿಸ್ತಾ ಇದ್ವಿ... ಕೆಲವು ಸಲ ಆಳುಗಳು ಪಟಾಕಿ ಹಚ್ಚಿ ಓಡಿಸ್ತಾ ಇದ್ರು. ಅವತ್ತು ಒಂಟಿ ಆನೆಯೊಂದು ಹಗಲು ಹೊತ್ತಲೇ ನಮ್ಮ ಮನೆಯ ಅಂಗಳಕ್ಕೆ ಬಂದಿತ್ತು. ನಾನು ಕಿಟಕಿಯಿಂದ ಬಾಳೆಹಣ್ಣುಗಳನ್ನು ಅದರತ್ತ ಎಸೆದಿದ್ದೆ. ಅದು ಹಣ್ಣು ತಿನ್ನಲೂ ಇಲ್ಲ, ಅಲ್ಲಿಂದ ಹೋಗಲೂ ಇಲ್ಲ. ಸುಮಾರು ಹೊತ್ತು ನಿಂತೇ ಇತ್ತು.